# ಅಣಬೆಯ ಪ್ರತಿಕೃತಿ

ಚಿತ್ರದುರ್ಗದ ತೋಟಗಾರಿಕಾ ಇಲಾಖೆಯ ಪ್ರದರ್ಶನದಲ್ಲಿ ಇತ್ತೀಚೆಗೆ ಅಣಬೆಯ ಬೆಳೆಗಾರರೊಬ್ಬರು ಅದರ ಪ್ರತಿಕೃತಿಯನ್ನು ಯಥಾವತ್ತಾಗಿ ಮಾಡಿ ಎಲ್ಲರ ಗಮನ ಸೆಳೆದರು. ಕತ್ತರಿಸಿದ ಅಡಿಕೆ ಗಿಡದ ಕಂಬ ಹಾಗೂ ಬಿದಿರಿನ ಬುಟ್ಟಿಯನ್ನು ಒಂದಕ್ಕೊಂದು ಜೋಡಿಸಿ ಬಣ್ಣ ಬಳಿದು ಅಣಬೆಯನ್ನು ಹೋಲುವಂತೆ ಮಾಡಿದ್ದರು. ಅದರ ಬೆಳೆ, ಬೀಜ, ಉತ್ಪನ್ನ.. ಎಲ್ಲವನ್ನೂ ಅಲ್ಲಿ ಪ್ರದರ್ಶಿಸಲಾಗಿತ್ತು.

**-ಎನ್.ಎಸ್.ಅಶ್ವಿನಿ, ಚಿತ್ರದುರ್ಗ**






# ಇರುವೆ ದೇವಾಲಯ

ಕೇರಳದ ಕಣ್ಣೂರು ಜಿಲ್ಲೆಯ ತೊಟ್ಟದಲ್ಲಿರುವ ಇರುವೆಗೆಂದೇ ಮೀಸಲಾಗಿರುವ ದೇವಾಲಯವಿದು. ಅಲ್ಲಿ ಒಂದು ಕಟ್ಟೆಯಷ್ಟೇ ಇದೆ. ಇದೇ ಕಟ್ಟೆಯ ಮೇಲೆ ತೆಂಗಿನ ಕಾಯಿಯನ್ನು ಒಡೆದು ತೆಂಗಿನ ನೀರನ್ನು ಇರುವೆಗಳಿಗೆ ನೈವೇದ್ಯವಾಗಿ ಅರ್ಪಿಸುತ್ತಾರೆ. ಇರುವೆಗಳ ಕಾಟ ಇದ್ದರೆ ಅಥವಾ ಇರುವೆಗಳ ಕಾಟ ಇರಬಾರದೆಂದು ಹರಕೆ ಹೊತ್ತುಕೊಂಡು ಈ ದೇವಾಲಯಕ್ಕೆ ಬರುತ್ತಾರೆ. ಈ ದೇವಾಲಯವನ್ನು ಉರುಂಬಚನ್ ಕೊಟ್ಟಂ ಎನ್ನುತ್ತಾರೆ. ಮಲಯಾಳಂನಲ್ಲಿ ಉರುಂಬ ಎಂದರೆ ಇರುವೆ ಹಾಗೂ ಅಚನ್ ಎಂದರೆ ಪಿತ. ಇದು ಇರುವೆಗಳ ಪಿತನಿಗೆ ಮುಡಿಪಾದ ದೇವಾಲಯ.

**-ಈರಣ್ಣ ಬೆಂಗಾಲಿ, ರಾಯಚೂರು**

# ಅಳಿವಿನಂಚಿನಲ್ಲಿ ಬಿಳಿ ಪತಂಗ

ಹಿಂದೆ ಗದ್ದೆಗಳ ಬದುಗಳಲ್ಲಿ ಹೆಚ್ಚಾಗಿ ಕಾಣ ಸಿಗುತ್ತಿದ್ದ ಬಿಳಿ ಪತಂಗಗಳು ಇತ್ತೀಚಿನ ದಿನಗಳಲ್ಲಿ ಕಾಣಸಿಗುವುದೇ ಅಪರೂಪ. ತರಕಾರಿ ತೋಟಕ್ಕೆ ಬರುವ ಕ್ರಿಮಿ ಕೀಟಗಳನ್ನು, ಮಣ್ಣನ್ನು (ಮಡ್ ಪಡ್ಲಿಂಗ್) ತಿನ್ನುವ ಇವು ಗದ್ದೆಗೆ ರಾಸಾಯನಿಕ ಬಳಕೆಯ ಪರಿಣಾಮವಾಗಿ ಕಣ್ಮರೆಯಾಗಿವೆ. ನದಿಯ ಬದುಗಳಲ್ಲಿ ಇಂದಿಗೂ ಅಪರೂಪಕ್ಕೊಮ್ಮೆ ಇವು ಕಾಣಸಿಗುತ್ತವೆ. ಗುಂಪಾಗಿ ವಾಸಿಸುವ ಪತಂಗಗಳು ಇದೀಗ ಅಳಿವಿನಂಚಿನಲ್ಲಿವೆ.

**-ಪ್ರೇಮ ಪಿ. ಕಾಯರ್ತಡ್ಕ, ಬೆಳ್ತಂಗಡಿ**

